ಓಡಾಡುತ್ತಾಳೆ ಎಂದು ಸಕೀನಾಳ ಅಮ್ಮಿ ಮತ್ತು ಅಬ್ಬಾಜಾನ್‌ಗೆ ದೂರುಗಳು ಬಂದವು. ನಂತರ ಅವಳ ಅಬ್ಬಾಜಾನ್ ಸಕೀನಾಳ ವಿದ್ಯಾಭ್ಯಾಸವನ್ನು ನಿಲ್ಲಿಸಿ, ಅವಳನ್ನು ದೂರದ ಹೈದರಾಬಾದ್‌ನಲ್ಲಿದ್ದ ಅವಳ ಮಾವನ ಮನೆಗೆ ಕಳುಹಿಸಿದರು. ಅವಳು ಪ್ರೈವೇಟಿನಲ್ಲಿ ಇಂಟರ್ ಪರೀಕ್ಷೆಯನ್ನು ಪಾಸು ಮಾಡಿದಳು. ಹೈದರಾಬಾದಿನಲ್ಲಿಯೇ ತಮ್ಮ ಸಂಬಂಧಿಕರ ಹುಡುಗನೊಂದಿಗೆ ಅವಳ ನಿಕಾಹ್ ಮಾಡಿದರು. ಆಗ ಅವಳು ಹದಿನೆಂಟನೆಯ ವಯಸ್ಸನ್ನೂ ದಾಟಿರಲಿಲ್ಲ.

ಕಾಲದೊಂದಿಗೆ ಎಲ್ಲವೂ ಬದಲಾಗುತ್ತಾ ಸಾಗಿತು. ನೀಲ್ ಸತ್ತ ದಿನ, ಅಸರಫ್ ಅಂಕಲ್ ಅಕಸ್ಮಾತ್ ನಮ್ಮ ಅಂಗಳದಲ್ಲಿ ಬಂದು ನಿಂತರು. ತುಂಬಿ ಬಂದ ಕಣ್ಣುಗಳಿಂದ ಅಪ್ಪನಿಗೆ ಸಮಾಧಾನ ಹೇಳಿದರು. ಅಪ್ಪ ಅವರ ಹೆಗಲ ಮೇಲೆ ತಲೆಯಿಟ್ಟು ಬಿಕ್ಕಳಿಸಿದರು. ಅವರು ಒಂಟಿಯಾಗಿದ್ದರು. ನಂತರ ಸಕೀನಾಳ ಅಬ್ಬಾಜಾನ್ ಅಪ್ಪನ ಪ್ರೀತಿಯ ಗೆಳೆಯರಲ್ಲಿ ಒಬ್ಬರಾದರು. ನಮ್ಮ ಮನೆಯ ಗೋಡೆ ಮತ್ತೆ ಕೆಳಗಿಳಿಯಿತು. ಅಸರಫ್ ಅಂಕಲ್ ಮತ್ತು ರೂಬಿ ಆಂಟಿ ಅವರ ಬಗ್ಗೆ ಗಮನ ಹರಿಸುತ್ತಿದ್ದರು. ಅಪ್ಪನಿಗಿಂತ ಇಪ್ಪತ್ತು ವರ್ಷ ಚಿಕ್ಕವರಾಗಿದ್ದ ರೂಬಿ ಆಂಟಿ ಈಗಲೂ ಯುವತಿಯಂತಿದ್ದರು. ಅಪ್ಪನ ಕಾಲುಗಳಲ್ಲಿ ನೋವು ಕಾಣಿಸಿಕೊಂಡಾಗ ಅವರ ಕಾಲುಗಳನ್ನು ಒತ್ತುತ್ತಿದ್ದರು. ಅವರನ್ನು 'ಕೋಶಿ ಭಯ್ಯಾ' ಎಂದು ಕರೆಯುತ್ತಿದ್ದರು.

ಅಂದು ನದಿಯ ತೀರದಲ್ಲಿ ಕೂತಿದ್ದ ನಾನು ಮತ್ತು ಸಕೀನಾ ಹಿಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಿದ್ದೆವು. ನೀಲ್‌ನ ವಿಷಯ ಬಂತು. ನನ್ನ ಮನಸ್ಸಿನಲ್ಲಿ ಕೂತಿದ್ದ ಮತ್ತು ಎಂದೂ ಕೇಳಲಾಗದಿದ್ದ ವಿಷಯವೊಂದನ್ನು ಕೇಳಿದೆ, 'ಸಕೀನಾ, ಅಂದು ರಾತ್ರಿ ನೀನು ನೀಲ್‌ನ ಕೋಣೆಯಲ್ಲಿದ್ದೆ; ಅಂಕಲ್ ಮತ್ತು ಆಂಟಿ ನಿನ್ನ ಕೈಯನ್ನು ಎಳೆಯುತ್ತಾ ನಿನ್ನನ್ನು ಕರೆದೊಯ್ದಿದ್ದರು, ಮರುದಿನ ಬೆಳಿಗ್ಗೆಯೇ ನಮ್ಮ ಮನೆಗಳ ನಡುವೆಯಿದ್ದ ಗೋಡೆ ಎತ್ತರವಾಯಿತು, ಇದೆಲ್ಲಾ ನೆನಪಿದೆಯಲ್ಲ... ಆದರೆ ನನ್ನದೊಂದು ಪ್ರಶ್ನೆ, ನೀವಿಬ್ಬರೂ ಕೋಣೆಯಲ್ಲಿ ಏನು ಮಾಡುತ್ತಿದ್ದಿರಿ?'

ಸಕೀನಾ ಮುಗುಳ್ನಗುತ್ತಾ ಹೇಳಿದಳು, 'ಮಾತನಾಡುತ್ತಿದ್ದೆವು...'

'ಮಾತಷ್ಟೇ...?'

ಸಕೀನಾ ದೂಷಿಸುತ್ತಾ ಹೇಳಿದಳು, 'ನನ್ನ ಮಗನಿಗೆ ಹದಿನೆಂಟು ವರ್ಷ, ನಾನು ಮೂವತ್ತಾರಕ್ಕೆ ಕಾಲಿಟ್ಟಿದ್ದೇನೆ. ಬಾಲ್ಯದ ವಿಷಯಗಳನ್ನು ಮುಚ್ಚಿಡುವಂಥ ವಯಸ್ಸೇ ಇದು? ಆ ವಿಷಯಗಳನ್ನು ನೆನಪಿಸಿಕೊಂಡರೆ ಈಗ ನಗು ಬರುತ್ತೆ...'

'ನಿಜ ಹೇಳಬೇಕೆಂದರೆ, ಜೀವನದಲ್ಲಿ ಎಷ್ಟೆಲ್ಲಾ ಸಮಸ್ಯೆಗಳಿವೆ, ಈಗ ಬಾಲ್ಯದ ಆ ವಿಷಯಗಳಿಗೆ ಮಹತ್ವವೇ ಇಲ್ಲ' ಎಂದೆ ನಾನು.

ಸಕೀನಾ ಒಂದು ಕ್ಷಣ ತಡೆದು ತನ್ನ ಮಾತನ್ನು ಮುಂದುವರೆಸಿದಳು, 'ಅಂದು ರಾತ್ರಿ ನನಗೆ ನಿದ್ರೆ ಬರುತ್ತಿರಲಿಲ್ಲ, ತುಂಬಾ ಸೆಕೆಯಾಗುತ್ತಿತ್ತು. ನಾನು ಮನೆಯಿಂದ ಹೊರ ಬಂದೆ. ನೀಲ್‌ನ ಕೋಣೆಯಲ್ಲಿ ದೀಪ ಉರಿಯುವುದನ್ನು ನೋಡಿದೆ. ನಾನು ಗೋಡೆ ಹಾರಿ ನಿಮ್ಮ ಮನೆಗೆ ಬಂದೆ. ಅವನ ಕೋಣೆಯ ಬಾಗಿಲನ್ನು ತಟ್ಟಿದೆ. ಅವನೂ ಎಚ್ಚರವಿದ್ದ. ತಕ್ಷಣ ಬಾಗಿಲು ತೆರೆದ. ಅವನೇನು ಹೇಳಿದ, ಗೊತ್ತಾ ನಿನಗೆ...?'

'ಏನು ಹೇಳಿದ?'

'ಬಾಗಿಲು ತಟ್ಟಿದ ಶಬ್ದ ನೀನು ಅಥವಾ ಅಪ್ಪ ತಟ್ಟಿದಂತಿರಲಿಲ್ಲ. ಅದು ಭಿನ್ನವಾಗಿರುತ್ತದೆ ಎಂದ. ಅವನ ಮೆದುಳಿನಲ್ಲಿ ಬಹುಶಃ ನಾನು ಬಾಗಿಲು ತಟ್ಟುತ್ತಿದ್ದೇನೆಂದು ಅನ್ನಿಸಿತು. ನಾನು ಅವನ ಎದುರಿಗಿದ್ದೆ.'

'ನಾವು ನಮ್ಮ ನಮ್ಮಲ್ಲೇ ಮಾತನಾಡಿಕೊಳ್ಳುತ್ತಿದೆವು... ನಮಗೆ ಸಮಯದ ಪರಿಜ್ಞಾನವೇ ಇರಲಿಲ್ಲ... ಎರಡು ಗಂಟೆಯಾಯಿತು.'

'ಗೊತ್ತಿದೆ...' ನಾನು ಅವಳಿಗೆ ಹೇಳಿದೆ, 'ಅಂಕಲ್ ಮತ್ತು ಆಂಟಿ ನಿಂದಿಸುತ್ತಾ ನಿನ್ನ ಕೈ ಹಿಡಿದು ಎಳೆದುಕೊಂಡು ಹೋದ ನಂತರ, ಅಂದು ನಮಗೆ ರಾತ್ರಿಯಿಡೀ ನಿದ್ರೆ ಬರಲಿಲ್ಲ. ನಮಗೆ ನಿನ್ನ ಬಗ್ಗೆ ಕರುಣೆ ಹುಟ್ಟಿತು. ನಾವು ನೀಲ್‌ನ ಕೋಣೆಯಲ್ಲಿಯೇ ಕೂತು ಮಾತನಾಡುತ್ತಿದ್ದೆವು. ಅಪ್ಪ ನೀಲ್‌ನನ್ನು ಕೇಳಿದರು, 'ನಿನಗೆ ಸಕೀನಾ ಇಷ್ಟವಾಗಿರುವಳೇ?' ಅವನು ಒಪ್ಪಿಗೆಯಲ್ಲಿ ತಲೆಯಾಡಿಸಿದ.

ಅಪ್ಪ, 'ಈಗ ನೀವಿಬ್ಬರೂ ನಿಮ್ಮ ವಿದ್ಯಾಭ್ಯಾಸದ ಬಗ್ಗೆ ಗಮನ ಕೊಡಿ. ಕಾಲ ಬಂದಾಗ ನಾನು ಸಕೀನಾಳ ಅಮ್ಮಿ–ಅಬ್ಬಾರೊಂದಿಗೆ ವಿವಾಹದ ಬಗ್ಗೆ ಮಾತನಾಡುತ್ತೇನೆ' ಎಂದರು.

'ಹೂಂ...' ನಾನು ಹೇಳಿದೆ – 'ಸಕೀನಾಳನ್ನು ಮದುವೆಯಾಗಲು ಇವನು ತನ್ನ ಧರ್ಮವನ್ನು ಬದಲಾಯಿಸಬೇಕಾಗುತ್ತದೆ.'

ಅವನೇನು ಹೇಳಿದ ಗೊತ್ತಾ?

'ಬದಲಾಯಿಸುತ್ತೇನೆ, ನಾನು ಇಸ್ಲಾಂ ಧರ್ಮವನ್ನು ಒಪ್ಪಿಕೊಳ್ಳುತ್ತೇನೆ' ಎಂದ. ನೋಡು ಸಕೀನಾ, ಪ್ರೀತಿ ಯಾವುದೇ ಎಲ್ಲೆಯನ್ನು ಮೀರುತ್ತದೆ, ಇದು ಜಾತಿ–ಧರ್ಮಕ್ಕೆ ಹೊರತಾಗಿದೆ. ಪ್ರೀತಿಸುವ ಇಬ್ಬರು ಮನುಷ್ಯರು ವಿವಾಹವನ್ನು ಮಾಡಿಕೊಳ್ಳಲು ತಮ್ಮ ಧರ್ಮ, ದೇಶ ಮತ್ತು ಇನ್ನೂ ಏನೇನನ್ನು ಬದಲಾಯಿಸುವರೋ... ಆದರೆ ದುಃಖದ ಸಂಗತಿ ಎಂದರೆ... ಆ ಸಮಯ ಬರಲೇ ಇಲ್ಲ... ನೀನು ಇದ್ದಕ್ಕಿದ್ದಂತೆ ತಪ್ಪಿಸಿಕೊಂಡೆ, ಕಡೆಗೆ ನಿನಗೆ ಮದುವೆಯಾದ ಸುದ್ದಿ ಸಿಕ್ಕಿತು. ನಂತರ ನೀನು ತವರಿಗೆ ಬಂದಾಗಲೆಲ್ಲಾ, ನಿನ್ನನ್ನು ನಿನ್ನ ಯಜಮಾನರೊಂದಿಗೇ ನೋಡಿದೆ.'

ಶಫೀಕರೊಂದಿಗೆ ಜೀವನ ಚೆನ್ನಾಗಿದೆ, ಇಂಥ ಗಂಡ ದೀಪ ಹಿಡಿದು ಹುಡುಕಿದರೂ ಸಿಗಲ್ಲ. ಆದರೆ ನಾನು ನೀಲ್‌ನ ಸಾವಿನ ಸುದ್ದಿ ತಿಳಿದು ತುಂಬಾ ರೋದಿಸಿದೆ. ಅಂದು ರಾತ್ರಿ ನನಗೆ ಊಟ ಸೇರಲಿಲ್ಲ. ನಾನು ಅಳುವುದನ್ನು ನೋಡಿ ಮಕ್ಕಳು ತಮ್ಮ ಅಬ್ಬಾಜಾನರನ್ನು, 'ಅಮ್ಮಿ ಯಾಕೆ ಅಳ್ತಿದ್ದಾಳೆ?' ಎಂದು ಕೇಳಿದಾಗ ಶಫೀಕ್ ಹೇಳಿದರು, 'ಅಮ್ಮಿಯ ತವರು ಮನೆಯ ಪ್ರಿಯ ಸ್ನೇಹಿತ ಖುದಾನಿಗೆ ಪ್ರಿಯನಾದ, ಅದಕ್ಕೇ ನಿಮ್ಮ ಅಮ್ಮಿ ಅಳ್ತಿದ್ದಾಳೆ.'

ನನ್ನಿಬ್ಬರು ಮಕ್ಕಳು ನನ್ನನ್ನು ತಬ್ಬಿಕೊಂಡು ನನಗೆ ಸಮಾಧಾನ ಹೇಳಿದರು. ನೀಲ್ ಬಗ್ಗೆ ಹೇಳಿದರು. 'ಪಾಪ... ನೀಲ್! ಅವನು ಸಾಯುವ ವಯಸ್ಸಾಗಿತ್ತೆ!'

ನನ್ನ ಕಣ್ಣುಗಳು ತುಂಬಿ ಬಂದವು.

ನಾವಿಬ್ಬರು ಕೆಲವು ಕ್ಷಣ ಮೌನ ವಹಿಸಿದೆವು. ಇದ್ದಕ್ಕಿದ್ದಂತೆ ಸಕೀನಾಳ ಗಮನಕ್ಕೆ ಏನೋ ಬಂದು ಕೇಳಿದಳು, 'ನಿನ್ನ ಜೀವನ ಹೇಗೆ ಸಾಗುತ್ತಿದೆ...? ನೀನೂ ಅಬ್ರಾಹಮ್‌ನನ್ನು ಪ್ರೀತಿಸುತ್ತಿದ್ದೆ...'

'ಹೂಂ, ಒಂದು ಕಾಲದಲ್ಲಿ ಪ್ರೀತಿಸುತ್ತಿದ್ದೆ...'

'ಹಾಂ, ನಿನ್ನ ಮತ್ತು ಅಬ್ರಾಹಮ್‌ನ ವಿಚ್ಛೇದನದ ಬಗ್ಗೆ ನಾನು ಕೇಳಿದ್ದೆ. ನಂತರ ನೀನು ಬಿಳಿಯವನನ್ನು ಮದುವೆಯಾಗಿ ಡೆನ್ಮಾರ್ಕ್‌ಗೆ ಹೋದ ವಿಷಯವನ್ನೂ ಕೇಳಿದ್ದೆ.'

'ನಾನು ಅವನನ್ನೂ ಬಿಟ್ಟೆ...' ಎಂದೆ ನಾನು

'ಎರಡನೆಯವನನ್ನೂ ಬಿಟ್ಟೆಯಾ? ಏಕೆ?' ಅವಳಿಗೆ ಆಶ್ಚರ್ಯವಾಯಿತು.

'ಅದೊಂದು ದೀರ್ಘ ಕಥೆ... ಮುಂದೆ ಯಾವಾಗಲಾದರೂ ಹೇಳ್ತೀನಿ...'

***

ಕಳೆದುಹೋದ ಕ್ಷಣಗಳಲ್ಲಿ ಅನೇಕ ವಿಷಯಗಳು ಮತ್ತು ನೆನಪುಗಳು ಹತ್ತಿಕ್ಕಲ್ಪಟ್ಟಿರುತ್ತವೆ. ಕೆಲವು ವಿಷಯಗಳು ಸುಂದರ ಮತ್ತು ಮಧುರವಾಗಿದ್ದು ಸದಾ ಜೊತೆಗಿರುತ್ತವೆ. ಆ ಕ್ಷಣಗಳು ನೆನಪಾಗುತ್ತಲೇ ಅನಾಯಾಸವಾಗಿಯೇ ಬಾಲ್ಯದ ಗಲ್ಲಿಗಳಲ್ಲಿ ಆಟವನ್ನು ಆರಂಭಿಸುತ್ತವೆ! ನಮ್ಮ ಮನೆಯಿಂದ ಬೆಟ್ಟವನ್ನು ಇಳಿದಾಗ ಆರಂಭವಾಗುವ ಇಳಿಜಾರಿನಲ್ಲಿ ನಮ್ಮ ಚರ್ಚ್ ಇತ್ತು. ಅದನ್ನು ನಾವು 'ನಮ್ಮ ಚರ್ಚ್' ಎನ್ನುತ್ತಿದ್ದೆವು. ಅದರ ಹೆಸರು 'ಹೋಲಿ ಟ್ರಿನಿಟಿ' ಎಂದಿತ್ತು. ನಾನು ಚರ್ಚ್‌ಗೆ ಹೋಗುತ್ತಿದ್ದೆ. ಅದು ಲೇಶಮಾತ್ರವೂ ಬದಲಾಗಿರಲಿಲ್ಲ. ಚರ್ಚ್‌ನಲ್ಲಿ ಮರದ ಬೆಂಚಿನಲ್ಲಿ ಕೂತಾಗ ಹಿಂದಿನ ನೆನಪುಗಳಲ್ಲಿ ಕಳೆದುಹೋಗುತ್ತಿದ್ದೆ. ಈ ಚರ್ಚ್‌ನಲ್ಲಿಯೇ ಅಬ್ರಾಹಮ್‌ನೊಂದಿಗೆ ನನ್ನ ಪ್ರೀತಿ ಚಿಗುರಿತ್ತು, ನಮ್ಮ ವಿವಾಹವೂ ಇಲ್ಲಿಯೇ ಆಗಿತ್ತು... ನಾನು ಅವನ ಪ್ರೇಮಪಾಶದಲ್ಲಿ ಹೇಗೆ ಕಟ್ಟಿ ಹಾಕಲ್ಪಟ್ಟೆ ಅಥವಾ ಸಿಲುಕಿದೆ ಎಂದು ಯೋಚಿಸಿ ಆಶ್ಚರ್ಯಪಡುತ್ತೇನೆ. ಇಂದಿನ ಸಂದರ್ಭವಾಗಿದ್ದರೆ, ನಾನು ಅವನನ್ನು ಖಂಡಿತ ಇಷ್ಟಪಡುತ್ತಿರಲಿಲ್ಲ. ನಾನು ಸಂಪೂರ್ಣವಾಗಿ ಬದಲಾಗಿದ್ದೇನೆ. ನಮಗೊಬ್ಬ ಮಗನಿದ್ದಾನೆ – ಜೋಶುಆ... ಅವನು ಏನನ್ನೂ ಮರೆಯಲು ಬಿಡುವುದಿಲ್ಲ.

ಮತ್ತೆ... ನಾನು ಕುಂಜಮ್ಮಾರ ತ್ಯಾಗವನ್ನೂ ಮರೆಯಲು ಬಯಸುವುದಿಲ್ಲ. ಕುಂಜಮ್ಮಾ ಹಟಮಾರಿಯಾದರೂ, ಅವರಿಗೆ ನಮ್ಮ ಪರಿವಾರದ ಬಗ್ಗೆ ದೀರ್ಘ ಕಾಲದವರೆಗೆ ಕಾಳಜಿಯಿತ್ತು, ಅದನ್ನು ನಾನು ಸದಾ ನೆನಪಿಟ್ಟುಕೊಳ್ಳಲು ಬಯಸುತ್ತೇನೆ. ಇದರಿಂದಾಗಿಯೇ ನಾನು ನನ್ನ ಕೇರಳ ಪ್ರವಾಸದ ವೇಳೆಯಲ್ಲಿ ಕುಂಜಮ್ಮಾರನ್ನು ಭೇಟಿಯಾಗಲು ಅವಶ್ಯವಾಗಿ ಹೋಗುತ್ತೇನೆ, ಅವರಿಗೆ ಏನಾದರೂ ಉಡುಗೊರೆಯನ್ನು ಕೊಡುತ್ತೇನೆ.

ದುರದೃಷ್ಟದಿಂದ ಕುಂಜಮ್ಮಾರ ಮಗ ಲ್ಯುಕಾ